**ಘಾನಾ ಅಧ್ಯಕ್ಷರನ್ನು ಭೇಟಿ ಮಾಡಿದ ಪ್ರಧಾನಮಂತ್ರಿ (ಜುಲೈ 02, 2025)**

ಜುಲೈ 02, 2025

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಘಾನಾ ಅಧ್ಯಕ್ಷ, ಗೌರವಾನ್ವಿತ ಡಾ. ಜಾನ್ ಡ್ರಾಮಣಿ ಮಹಾಮಾ ಅವರನ್ನು ಭೇಟಿ ಮಾಡಿದರು. ಜುಬಿಲಿ ಹೌಸ್‌ಗೆ ಬಂದ ನಂತರ, ಅವರನ್ನು ಅಧ್ಯಕ್ಷ ಮಹಾಮಾ ಬರ ಮಾಡಿಕೊಂಡರು. ಘಾನಾಗೆ ಪ್ರಧಾನಮಂತ್ರಿಯವರ ಈ ಅಧಿಕೃತ ಭೇಟಿಯು ಮೂರು ದಶಕಗಳಲ್ಲಿ ಅಂತಹ ಮೊದಲ ಭೇಟಿಯಾಗಿದೆ.

2. ಇಬ್ಬರು ನಾಯಕರೂ ಖಾಸಗಿಯಾಗಿ ಮತ್ತು ನಿಯೋಗ ಮಟ್ಟದ ಸ್ವರೂಪಗಳಲ್ಲಿ ಸಭೆ ನಡೆಸಿದರು ಮತ್ತು ವ್ಯಾಪಕ ಶ್ರೇಣಿಯ ಮಾತುಕತೆಗಳನ್ನು ನಡೆಸಿದರು. ಸಮಗ್ರ ಪಾಲುದಾರಿಕೆಗೆ ಸಂಬಂಧವನ್ನು ಹೆಚ್ಚಿಸಲು ಅವರು ಒಪ್ಪಿಕೊಂಡರು. ಉಭಯ ನಾಯಕರು ಭಾರತ ಮತ್ತು ಘಾನಾ ನಡುವಿನ ಆತ್ಮೀಯ ಮತ್ತು ಕಾಲಾತೀತ ಸಂಬಂಧಗಳನ್ನು ಪುನರುಚ್ಚರಿಸಿದರು ಹಾಗೂ ವ್ಯಾಪಾರ ಮತ್ತು ಹೂಡಿಕೆ, ಕೃಷಿ, ಸಾಮರ್ಥ್ಯ ವರ್ಧನೆ, ಡಿಜಿಟಲ್ ತಂತ್ರಜ್ಞಾನ, ಮೂಲಸೌಕರ್ಯ ಮತ್ತು ಜನರ ನಡುವಿನ ಬಾಂಧವ್ಯ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರವನ್ನು ವಿಸ್ತರಿಸುವ ಮಾರ್ಗಗಳ ಬಗ್ಗೆ ಚರ್ಚಿಸಿದರು. ಅವರು ಘಾನಾದಲ್ಲಿ ಬೆಳವಣಿಗೆ ಕಾಣುತ್ತಿರುವ ದ್ವಿಪಕ್ಷೀಯ ವ್ಯಾಪಾರ ಮತ್ತು ಭಾರತೀಯ ಹೂಡಿಕೆಗಳನ್ನು ಸ್ವಾಗತಿಸಿದರು. ನಾಯಕರು ರಕ್ಷಣೆ ಮತ್ತು ಭದ್ರತಾ ಪಾಲುದಾರಿಕೆಯನ್ನು ಬಲಪಡಿಸುವುದರ ಬಗ್ಗೆಯೂ ಚರ್ಚಿಸಿದರು. ವಿಶೇಷವಾಗಿ ಭಾರತ-ಬೆಂಬಲಿತ ಮೂಲಸೌಕರ್ಯ ಮತ್ತು ಸಾಮರ್ಥ್ಯ-ನಿರ್ಮಾಣ ಯೋಜನೆಗಳ ಮೂಲಕ ಅಭಿವೃದ್ಧಿ ಸಹಕಾರ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಅವರು ಬದ್ಧರಾಗಿದ್ದಾರೆ. ಆರೋಗ್ಯ, ಫಾರ್ಮಾ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, UPI ಮತ್ತು ಕೌಶಲ್ಯ ಅಭಿವೃದ್ಧಿಯ ಕ್ಷೇತ್ರಗಳಲ್ಲಿನ ತನ್ನ ಅನುಭವಗಳನ್ನು ಹಂಚಿಕೊಳ್ಳಲು ಭಾರತ ಸಿದ್ಧವಾಗಿರುವುದಾಗಿ ಹೇಳಿತು. ಜಾಗತಿಕ ದಕ್ಷಿಣದ ಕಾಳಜಿಗಳಿಗೆ ಧ್ವನಿಯಾಗುವ ಭಾರತದ ಬದ್ಧತೆಯನ್ನು ಪ್ರಧಾನಮಂತ್ರಿಯವರು ತಿಳಿಸಿದರು ಮತ್ತು ಈ ನಿಟ್ಟಿನಲ್ಲಿ ಘಾನಾದ ಒಗ್ಗಟ್ಟಿಗೆ ಧನ್ಯವಾದ ಅರ್ಪಿಸಿದರು. ಘಾನಾದಲ್ಲಿ 15,000 ಸಂಖ್ಯೆಯಲ್ಲಿ ಭಾರತೀಯ ಸಮುದಾಯವನ್ನು ನೋಡಿಕೊಳ್ಳುತ್ತಿರುವುದಕ್ಕಾಗಿ ಪ್ರಧಾನಮಂತ್ರಿ ಅಧ್ಯಕ್ಷ ಮಹಾಮಾ ಅವರಿಗೆ ಧನ್ಯವಾದ ಸಲ್ಲಿಸಿದರು.

3. ಇಬ್ಬರೂ ನಾಯಕರು ವಿಶ್ವಸಂಸ್ಥೆಯ ಸುಧಾರಣೆಗಳು ಸೇರಿದಂತೆ ಪರಸ್ಪರ ಹಿತಾಸಕ್ತಿಯ ಜಾಗತಿಕ ಸಮಸ್ಯೆಗಳ ಬಗ್ಗೆ ಚರ್ಚಿಸಿದರು. ಪಹಲ್ಗಾಮ್ ಭಯೋತ್ಪಾದಕ ದಾಳಿಯ ಹಿನ್ನೆಲೆಯಲ್ಲಿ ಅಧ್ಯಕ್ಷ ಮಹಾಮಾ ಅವರ ಬೆಂಬಲ ಮತ್ತು ಐಕ್ಯತೆಯ ಸಂದೇಶಕ್ಕಾಗಿ ಪ್ರಧಾನಮಂತ್ರಿ ಧನ್ಯವಾದ ಅರ್ಪಿಸಿದರು. ಭಯೋತ್ಪಾದನೆಯ ವಿರುದ್ಧ ಜಾಗತಿಕ ಹೋರಾಟವನ್ನು ಬಲಪಡಿಸಲು ಎರಡೂ ಕಡೆಯವರು ಒಪ್ಪಿಕೊಂಡರು. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯಲ್ಲಿ ಅದರ ಸದಸ್ಯತ್ವ ಮತ್ತು ಕಾಮನ್‌ವೆಲ್ತ್ ಪ್ರಧಾನ

ಕಾರ್ಯದರ್ಶಿಯಾಗಿ ಘಾನಾದ ವಿದೇಶಾಂಗ ಸಚಿವರ ಆಯ್ಕೆ ಸೇರಿದಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯುತ್ತಿರುವ ಘಾನಾದ ಖ್ಯಾತಿಗೆ ಪ್ರಧಾನಿ ಅಭಿನಂದನೆ ಸಲ್ಲಿಸಿದರು. ಉಭಯ ನಾಯಕರು ಪ್ರಜಾಪ್ರಭುತ್ವ ಮೌಲ್ಯಗಳು, ದಕ್ಷಿಣ-ದಕ್ಷಿಣ ಸಹಕಾರ, ಸುಸ್ಥಿರ ಅಭಿವೃದ್ಧಿ ಮತ್ತು ಜಾಗತಿಕ ಶಾಂತಿಗಾಗಿ ಹಂಚಿಕೆಯ ದೃಷ್ಟಿಕೋನದ ಬಗ್ಗೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು.

4. ನಿಯೋಗ ಮಟ್ಟದ ಮಾತುಕತೆಯ ಬೆನ್ನಲ್ಲೇ, ಸಂಸ್ಕೃತಿ, ಮಾನದಂಡಗಳು, ಆಯುರ್ವೇದ ಮತ್ತು ಸಾಂಪ್ರದಾಯಿಕ ಔಷಧದ ಕ್ಷೇತ್ರಗಳಲ್ಲಿ ನಾಲ್ಕು ತಿಳಿವಳಿಕೆ ಒಪ್ಪಂದಗಳು ಮತ್ತು ವಿದೇಶಿ ಸಚಿವಾಲಯಗಳ ನಡುವಿನ ತೊಡಗುವಿಕೆಗಾಗಿ ಜಂಟಿ ಆಯೋಗದ ಕಾರ್ಯವಿಧಾನವನ್ನು ವಿನಿಮಯ ಮಾಡಿಕೊಳ್ಳಲಾಯಿತು. ಅಧ್ಯಕ್ಷ ಮಹಾಮಾ ಅವರು ಪ್ರಧಾನಮಂತ್ರಿಗಳ ಗೌರವಾರ್ಥ ಔತಣಕೂಟ ಆಯೋಜಿಸಿದ್ದರು. ಅವರ ಭವ್ಯ ಆತಿಥ್ಯಕ್ಕಾಗಿ ಧನ್ಯವಾದ ಅರ್ಪಿಸಿದ ಪ್ರಧಾನಮಂತ್ರಿ, ಪರಸ್ಪರ ಅನುಕೂಲಕರ ಸಮಯದಲ್ಲಿ ಭಾರತಕ್ಕೆ ಭೇಟಿ ನೀಡಲು ಅಧ್ಯಕ್ಷ ಮಹಾಮಾ ಅವರನ್ನು ಆಹ್ವಾನಿಸಿದರು.

ಅಕ್ರಾ

ಜುಲೈ 02, 2025